ಒ.ಎಸ್. ನಂ.112/2016
ಡಿಡಬ್ಲು-1

ದಿನಾಂಕ 20.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ಈಗ ನನ್ನ ವಯಸ್ಸು 50-ವರ್ಷಗಳಿವೆ. ನನ್ನ ತಂದೆ ತೇಜಪ್ಪ 25-ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಾತನ ಹೆಸರು ಬಸಲಿಂಗಪ್ಪ ಇರುತ್ತದೆ. ನನಗೆ 2-3 ವರ್ಷಗಳಿರುವಾಗ ನನ್ನ ಅಜ್ಜ ಮೃತಪಟ್ಟಿರುತ್ತಾರೆ. ನನ್ನ ತಾತ ಬಸಲಿಂಗಪ್ಪನ ತಂದೆ ಹೆಸರು ನಾಗಪ್ಪ ಇರುತ್ತದೆ. ನನ್ನ ತಾತ ಬಸಲಿಂಗಪ್ಪನ ತಂದೆ ನಾಗಪ್ಪನವರ ತಮ್ಮನ ಹೆಸರು ಭೀಮಪ್ಪ ಎಂದರೆ ಸರಿ. ದಾವಾಸ್ತಿಗಳು ನನ್ನ ತಾತ ಬಸಲಿಂಗಪ್ಪನ ಸಂಬಂಧಪಟ್ಟ ಆಸ್ತಿಗಳು ಎಂದರೆ ಸರಿ. ನನ್ನ ತಾತ ಬಸಲಿಂಗಪ್ಪನಿಗೆ ತೇಜಪ್ಪ ಮತ್ತು ಬಸಮ್ಮ ಎಂಬ ಮಕ್ಕಳು ಇರುತ್ತಾರೆ. ನನ್ನ ತಾತ ಬಸಲಿಂಗಪ್ಪನಿಗೆ ಮೊದಲನೆ ಹೆಂಡತಿ ಮಡಿವಾಳಮ್ಮಗೆ ಮಕ್ಕಳಾಗದ ಕಾರಣ ಲಕ್ಷ್ಮಿಬಾಯಿಯವರನ್ನು ಮದುವೆಯಾಗಿರುತ್ತಾರೆ. ದಾವಾಸ್ತಿಗಳನ್ನು ಬಸಲಿಂಗಪ್ಪರವರ ಕುಟುಂಬದವರೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ.

ಬಸಲಿಂಗಪ್ಪನವರೆ ತೇಜಪ್ಪ ಮತ್ತು ಹಣಮಂತರಾಯ ಮಕ್ಕಳಿರುತ್ತಾರೆ ಎಂದರೆ ಸಾಕ್ಷಿ ತೇಜಪ್ಪ ಮಾತ್ರ ಮಗನಿರುತ್ತಾನೆ ಎಂದು ಹೇಳುತ್ತಾರೆ. ನಿಪಿ-10 ರಲ್ಲಿ ಬಸಲಿಂಗಪ್ಪ ತಂದೆ ನಾಗಪ್ಪ ಎಂದು ಇರುತ್ತದೆ ಎಂದೆರ ಸರಿ. ನಿಪಿ-10 ರಲ್ಲಿ ಸರ್ವೆ ನಂ.134 ರ ಪಹಣಿಯ ಕಾಲಂ ನಂ.12 ರಲ್ಲಿ ಹಣಮಂತ ತಂದೆ ಬಸಲಿಂಗಪ್ಪ ಮತ್ತು ದೇವಣ್ಣ ಸಾಗುವಳಿದಾರ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ-3 ರಲ್ಲಿ ಸರ್ವೆ ನಂ.134 ರ ಕಾಲಂ.12 ರಲ್ಲಿ ಹಣಮಂತರಾಯ ತಂದೆ ಬಸಲಿಂಗಪ್ಪ ಎಂದು 1993 ರಿಂದ 1998 ರವರೆಗೆ ಸಾಗುವಳಿದಾರ ಎಂದು  ನಮೂದಾಗಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ವಾದಿಯು ನಮ್ಮ ಕುಟುಂಬಕ್ಕೆ ಸಂಬಂಧಿವಿಲ್ಲ ಎಂದು ಹೇಳುತ್ತಾರೆ. ವಾದಿ ನಮ್ಮ ಕುಟುಂಬಕ್ಕೆ ಸಂಬಂಧವಿಲ್ಲ ಎಂದರೆ ಸರ್ವೆ ನಂ.134 ರಲ್ಲಿ ಹಣಮಂತರಾಯ ಹೆಸರು ಏಕೆ ಬಂದಿರುತ್ತದೆ ಎಂದರೆ ಸಾಕ್ಷಿ ಎ.ಸಿ. ಕಲಬುರಗಿಯವರ ಮುಂದರೆ ಅಪೀಲು ಮಾಡಿರುತ್ತಾರೆ. ಹಣಮಂತರಾಯ ತಂದೆ ಬಸಲಿಂಗಪ್ಪ ನಿಮಗೇನಾಗಬೇಕು ಎಂದರೆ ಸಾಕ್ಷಿ ನಮಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ.

1973 ರಿಂದ 1997 ರವರೆಗೆ ದಾವಾಸ್ತಿಗಳ ಪಹಣಿ ಕಾಲಂ ನಂ.12 ರಲ್ಲಿ ಹಣಮಂತರಾಯ ತಂದೆ ಬಸಲಿಂಗಪ್ಪರವರ ಹೆಸರು ಬಂದ ಕುರಿತು ನನ್ನ ಪ್ರತಿವಾದ ಪತ್ರದಲ್ಲಿ

ಬರೆಸಿರುತ್ತೀರಾ ಎಂದರೆ ಸಾಕ್ಷಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ. 1994 ರ ಚುನಾವಣೆ ಗುರುತಿನ ಚೀಟಿಯಲ್ಲಿ ಹಣಮಂತರಾಯ ತಂದೆ ಬಸಲಿಂಗಪ್ಪ ಎಂದು ಇರುತ್ತದೆ ಎಂದರೆ ಸರಿಯಲ್ಲ. ನಿಡಿ-1 ವಂಶಾವಳಿಯಿದ್ದು ನನ್ನ ತಂದೆ ತೇಜಪ್ಪರವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಡಿ-1 ರಲ್ಲಿ ಕ್ರ.ಸಂ.2 ರಲ್ಲಿ ಬಸಲಿಂಗಪ್ಪರವರ ತಂದೆ ಹೆಸರು ನಮೂದಾಗಿಲ್ಲ ಎಂದರೆ ಸಾಕ್ಷಿ ನನ್ನ ತಂದೆಗೆ ಸಂಬಂಧಪಟ್ಟ ವಂಶಾವಳಿ ಮಾತ್ರ ನೀಡಿರುತ್ತಾರೆ ಎಂದು ಹೇಳುತ್ತಾರೆ. ಅದೇ ರೀತಿ ನಾಗಪ್ಪರವರ ಹೆಂಡತಿ ಬಸಮ್ಮರವರ ಹೆಸರೂ ಸಹ ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ನಾಗಪ್ಪರವರ ತಮ್ಮನ ಹೆಸರು ಭೀಮಪ್ಪನ ಹೆಸರೂ ಸಹ ನಮೂದಿಸಿಲ್ಲ ಎಂದರೆ ಸರಿ. ಭೀಮಪ್ಪನ ಮಗ ಮಡಿವಾಳಪ್ಪ ಎಂದರೆ ಸರಿ. ಸರ್ವೆ ನಂ.134/ಆ 10-ಎಕರೆ 30-ಗುಂಟೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿರುತ್ತದೆ ಎಂದು ಹೇಳುತ್ತಾರೆ. ನಿಪಿ-26 ಸರ್ವೆ ನಂ.134/ಆ 10-ಎಕರೆ 30-ಗುಂಟೆ ಜಮೀನು ನನ್ನ ತಂದೆಯದಲ್ಲ ಆದರೆ ಮಡಿವಾಳಪ್ಪ ತಂದೆ ಭೀಮಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿ. ನಿಪಿ-26 ನನ್ನ ಅಜ್ಜನಿಗೆ ಹೇಗೆ ಬಂತು ಎಂದರೆ ಸಾಕ್ಷಿ ನನ್ನ ಅಜ್ಜ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-26 ರ ಜಮೀನು ಯಾವುದೆ ಆಧಾರವಿಲ್ಲದೆ ನನ್ನ ಅಜ್ಜನ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-26 ರ ಜಮೀನು ನನ್ನ ತಂದೆಗೆ ಯಾವ ರೀತಿ ಬಂದಿರುತ್ತದೆ ನನ್ನ ಅಜ್ಜ ಖರಿದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ.

ಹಣಮಂತರಾಯರವರು ಬಸಲಿಂಗಪ್ಪನವರ ಮಗ ಅಲ್ಲ ಎಂದು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆ ತೇಜಪ್ಪರವರ ಖಾಸ ಸಹೋದರ ಹಣಮಂತರಾಯ ಇದ್ದು ಹಣಮಂತರಾಯನ ಮಗ ವಾದಿ ಎಂದರೆ ಸರಿಯಲ್ಲ. ನಿಪಿ-24 ಸರ್ವೆ ನಂ.134 ರಲ್ಲಿ 10-ಎಕರೆ 35-ಗುಂಟೆ ಜಮೀನು ಇದ್ದು ಅದು ವಾದಿಗೆ ಯಾವ ರೀತಿ ಬಂದಿರುತ್ತದೆ ಎಂದರೆ ಸಾಕ್ಷಿ ಕೈಬರಹ ಪಹಣಿಯಿದ್ದರಿಂದ ಬಂದಿರುತ್ತದೆ ಎಂದು ಹೇಳುತ್ತಾರೆ. ನಿಪಿ-42 ಮುಟೇಷನ ನಂ.ಹೆಚ್-134 ನಾನೆ ವಾದಿಗೆ ಹಕ್ಕು ಬಿಡುಗಡೆ ಪತ್ರ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಸಹಿ ಮಾಡಿಲ್ಲ ಎಂದು ಹೇಳುತ್ತಾರೆ.

ಎಲ್ಲಾ ದಾವಾಸ್ತಿಗಳಲ್ಲಿ ನನಗೆ ಎಷ್ಟು ಹಕ್ಕಿದೆಯೊ ವಾದಿಯ ತಂದೆಗೂ ಸಹ 1/3 ಅಂಶ ಸ್ವತ್ತುಗಳ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. 9ನೆ ಪ್ರತಿವಾದಿಗೆ ನನ್ನ ಅತ್ತೆ ಇದ್ದು ನಾನು ಅವರಿಗೆ ಪಾಲು ನೀಡಿಲ್ಲ ಎಂದರೆ ಸರಿ. ಸರ್ವೆ ನಂ.88/2, 88/3, 88/4 ನಿಮ್ಮ ಮಕ್ಕಳ ಹೆಂಡತಿಯ ಹೆಸರಿಗೆ ಮತ್ತು ನಿಮ್ಮ ತಮ್ಮನ ಹೆಂಡತಿ ಮಕ್ಕಳ ಹೆಸರಿಗೆ ಯಾವ

ಆಧಾರದ ಮೇಲೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಕುಟುಂಬದಲ್ಲಿ ಪಾಲು ಮಾಡಿಕೊಂಡಿರುತ್ತೇವೆ ಎಂದು ಹೇಳುತ್ತಾರೆ. ವಾದಿಗೆ ಪಾಲು ಕೊಡಬಾರದೆಂದು ನನ್ನ ಹೆಂಡತಿ, ಮಕ್ಕಳು ಹಾಗೂ ನನ್ನ ತಮ್ಮನ ಹೆಂಡತಿ ಮಕ್ಕಳ ಹೆಸರಿಗೆ ಮಾಡಿರುತ್ತೇನೆ ಎಂದರೆ ಸಾಕ್ಷಿ ವಾದಿ ನಮಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ.

ದಾವಾಸ್ತಿ ಐಟಂ ನಂ.11 ನನ್ನ ತಮ್ಮನ ಹೆಂಡತಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ದಾವಾಸ್ತಿ ಐಟಂ ನಂ.12 ನನ್ನ ಹಣಮಂತರಾಯ ತಂದೆ ಬಸಲಿಂಗಪ್ಪ ರವರ ಹೆಸರಿನಲ್ಲಿರುತ್ತದೆ ಎಂದರೆ ಯಾವಾಗ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ನಾವೆ ವಾಸವಾಗಿರುತ್ತೇವೆ ಎಂದು ಹೇಳುತ್ತಾರೆ. ಹಣಮಂತರಾಯರವರು ಊರಲ್ಲಿ ಇರದ ಕಾರಣ ನಾವು ಅವರ ಮನೆಯಲ್ಲಿ ವಾಸವಾಗಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಮನೆಯನ್ನು ನಾನು ಅನಧಿಕೃತವಾಗಿ ಕಬ್ಜೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ತಿ ಐಟಂ ನಂ.12 ಹಣಮಂತರಾಯ ತಂದೆ ಬಸಲಿಂಗಪ್ಪರವರ ಸ್ವಂತ ಮನೆ ಎಂದರೆ ಸರಿಯಲ್ಲ. ನಿಡಿ-1 ನ್ನು ಪಡಿತರ ಚೀಟಿಯ ಆಧಾರದ ಮೇಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ತಂದೆಗೆ ದಾವಾಸ್ತಿಳಲ್ಲಿ 1/3 ಅಂಶ ಪಾಲು ಇರುತ್ತದೆ ಎಂದರೆ ಸರಿಯಲ್ಲ. ವಾದಿಯ ತಂದೆಗೆ ಹಕ್ಕು ಇದ್ದರೂ ಸಹ ಪಾಲು ಕೊಡಬಾರದೆಂದು ನನ್ನ ಹೆಂಡತಿ ಮಕ್ಕಳ ಹಾಗೂ ನನ್ನ ತಮ್ಮನ ಹೆಂಡತಿ ಮಕ್ಕಳ ಹೆಸರಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಹಣಮಂತರಾಯ, ನನ್ನ ತಂದೆ ಹಾಗೂ ಬಸಮ್ಮ ಬಲಿಂಗಪ್ಪರವರ ಮಕ್ಕಳು ಇದ್ದು ಅವರಿಗೂ ಸಹ ಸಮನಾದ ಪಾಲು ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ